# All India Radio: Bangalore
# National Bulletins In Kannada
# 16.07.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**16.07.2025 / 7.35 am**

**<><*<><>*><>**

ಮುಖ್ಯಾಂಶಗಳು

- **ಹತ್ತು ವರ್ಷ ಪೂರೈಸಿದ ಸ್ಕಿಲ್ ಇಂಡಿಯಾ ಮಿಷನ್; ಕೌಶಲ್ಯಪೂರ್ಣ ಸ್ವಾವಲಂಬಿ ಯುವಪಡೆ ಸೃಷ್ಟಿಸುವ ಬದ್ಧತೆ ಪುನರುಚ್ಚರಿಸಿದ ಪ್ರಧಾನಿ**
- **ನಾಳೆ ದೆಹಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರತಿಷ್ಠಿತ ಸ್ವಚ್ಛ ಸರ್ವೇಕ್ಷಣಾ ಪ್ರಶಸ್ತಿ ಪ್ರದಾನ**
- **ಭಾರತದಲ್ಲಿಂದು ಕೃತಕ ಬುದ್ಧಿಮತ್ತೆ ಪ್ರಸಂಶಾ ದಿನಾಚರಣೆ**
- **ಏಳು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳ ಬಯೋಮೆಟ್ರಿಕ್ ನವೀಕರಣ ಪೂರ್ಣಗೊಳಿಸಲು ’ಯುಐಡಿಎಐ’ ಪೋಷಕರಿಗೆ ಸೂಚನೆ**
- **ಇಂದಿನಿಂದ ಜಪಾನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿ; ಭಾರತವನ್ನು ಪ್ರತಿನಿಧಿಸಲಿರುವ ಪಿ.ವಿ.ಸಿಂಧೂ, ಲಕ್ಷ್ಯ ಸೇನ್ ಮತ್ತಿತರ ಆಟಗಾರರು**

**<><*<><>*><>**

ಸ್ಕಿಲ್ ಇಂಡಿಯಾ ಮಿಷನ್ ೧೦ ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಮಿಷನ್ ಮೂಲಕ ಕೌಶಲ್ಯಪೂರ್ಣ ಮತ್ತು ಸ್ವಾವಲಂಬಿ ಯುವ ಪಡೆಯನ್ನು ಸೃಷ್ಟಿಸುವ ಸರ್ಕಾರದ ದೃಢ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಸ್ಕಿಲ್ ಇಂಡಿಯಾ ಮಿಷನ್ ದೇಶಾದ್ಯಂತ ಲಕ್ಷಾಂತರ ಜನರನ್ನು ಸಬಲೀಕರಣಗೊಳಿಸುವ ಒಂದು ಪರಿವರ್ತನಾ ಉಪಕ್ರಮವಾಗಿದೆ ಎಂದು ಅವರು ಹೇಳಿದ್ದಾರೆ.

MyGovIndia ಮತ್ತು ಕೇಂದ್ರ ಸಚಿವ ಜಯಂತ್ ಸಿಂಗ್ ಅವರ ಸಾಮಾಜಿಕ ಮಾಧ್ಯಮಖಾತೆ ಎಕ್ಸ್ ಪೋಸ್ಟ್‌ಗೆ ಪ್ರಧಾನಮಂತ್ರಿ ಪ್ರತಿಕ್ರಿಯಿಸಿದ್ದಾರೆ. "ನಮ್ಮ ಯುವಜನರನ್ನು ಕೌಶಲ್ಯಪೂರ್ಣ ಮತ್ತು ಸ್ವಾವಲಂಬಿಗಳನ್ನಾಗಿ ಮಾಡುವ ನಮ್ಮ ಸಂಕಲ್ಪವನ್ನು ಸ್ಕಿಲ್ ಇಂಡಿಯಾ ಬಲಪಡಿಸುತ್ತಿದೆ. ಹಸಿರು ಮತ್ತು ಸುಸ್ಥಿರ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಭಾರತದ ಬದ್ಧತೆ ಮತ್ತು

ಪ್ರಯತ್ನಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶ್ಲಾಘಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ಎಕ್ಸ್‌ಪೋಸ್ಟ್ ಗೆ ಪ್ರತಿಕ್ರಿಯಿಸಿ ಪ್ರಧಾನಿ, "ಇದು ಹಸಿರು ಮತ್ತು ಸುಸ್ಥಿರ ಭವಿಷ್ಯವನ್ನು ನಿರ್ಮಿಸುವೆಡೆಗೆ ಭಾರತದ ಬದ್ಧತೆ ಮತ್ತು ಪ್ರಯತ್ನಗಳಿಗೆ ನಿದರ್ಶನವಾಗಿದೆ." ಎಂದು ಹೇಳಿದ್ದಾರೆ.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ನಾಳೆ ೨೦೨೪-೨೫ನೇ ಸಾಲಿನ ಪ್ರತಿಷ್ಠಿತ ಸ್ವಚ್ಛ ಸರ್ವೇಕ್ಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. 'ಸ್ವಚ್ಛ ಭಾರತ ನಗರ ಮಿಷನ್' ನಗರಗಳ ನಿರಂತರ ಪ್ರಯತ್ನಗಳನ್ನು ಗುರುತಿಸುತ್ತದೆ. ಈ ವರ್ಷ, ಸೂಪರ್ ಸ್ವಚ್ಛ ಲೀಗ್ ನಗರಗಳು ಮತ್ತು ಐದು ಜನಸಂಖ್ಯೆ ವಿಭಾಗಗಳಲ್ಲಿ ಅಗ್ರ ಮೂರು ಸ್ವಚ್ಛ ನಗರಗಳು ಸೇರಿದಂತೆ ನಾಲ್ಕು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಈ ವರ್ಷ ಒಟ್ಟು ೭೮ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಸ್ವಚ್ಛ ಸರ್ವೇಕ್ಷಣ ೨೦೨೪-೨೫ ನಗರ ಸ್ವಚ್ಛತೆ ಮತ್ತು ಸೇವಾ ವಿತರಣೆಯನ್ನು ನಿರ್ಣಯಿಸಲು ಸ್ಮಾರ್ಟ್, ರಚನಾತ್ಮಕ ವಿಧಾನವನ್ನು ಅಳವಡಿಸಿಕೊಂಡಿದೆ. ಇದು ನಗರಗಳಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಯ ಸಂಪೂರ್ಣ ನೋಟವನ್ನು ನೀಡುತ್ತದೆ ಎಂದು ಸಚಿವಾಲಯ ತಿಳಿಸಿದೆ.

<><*<><>*><>

ಭಾರತದಲ್ಲಿ ಇಂದು ಕೃತಕ ಬುದ್ಧಿಮತ್ತೆ-ಎಐ ಪ್ರಸಂಶ ದಿನವನ್ನು ಆಚರಿಸಲಾಗುತ್ತಿದೆ. ಜಾಗತಿಕ ಎಐ ಆಯಾಮದಲ್ಲಿ ದೇಶದ ಹೆಚ್ಚುತ್ತಿರುವ ಪಾತ್ರವನ್ನು ಸ್ಮರಿಸಲು ಈ ದಿನ ಆಚರಿಸುತ್ತದೆ. ಬೆಂಗಳೂರು ಮತ್ತು ಹೈದರಾಬಾದ್‌ನಂತಹ ತಂತ್ರಜ್ಞಾನ ಕೇಂದ್ರಗಳಿಂದ ಗ್ರಾಮೀಣ ಪ್ರದೇಶಗಳವರೆಗೆ ಕೃತಕ ಬುದ್ದಿಮತ್ತೆ ದೇಶದಲ್ಲಿ ಆರೋಗ್ಯ ರಕ್ಷಣೆ, ಶಿಕ್ಷಣ, ಕೃಷಿ, ಆಡಳಿತ ಮತ್ತು ಉದ್ಯಮಗಳಲ್ಲಿ ಗಮನಾರ್ಹ ಪರಿವರ್ತನೆಯನ್ನು ತಂದಿದೆ. ಕೃತಕ ಬುದ್ದಿಮತ್ತೆಯಲ್ಲಿ ಭಾರತದ ಪ್ರಗತಿಯು ಹಲವು ವರ್ಷಗಳ ನಿಖರ ಯೋಜನೆ ಮತ್ತು ಬೆಂಬಲದಿಂದ ಸಾಧ್ಯವಾಗಿದೆ. ಸರ್ಕಾರದ ಎಲ್ಲದರೂ ಕೃತಕ ಬುದ್ಧಿಮತ್ತೆ ದೂರದೃಷ್ಟಿ ಮತ್ತು ರಾಷ್ಟ್ರೀಯ ಕಾರ್ಯತಂತ್ರ, ಆರ್ಥಿಕ ಬೆಳವಣಿಗೆಗೆ ಮಾತ್ರವಲ್ಲದೆ ಜೀವನವನ್ನು ಸುಧಾರಿಸಲು ಮತ್ತು ಸಮಾನತೆಯನ್ನು ಉತ್ತೇಜಿಸಲು ಐಎ ಬಳಕೆ ಮಾಡುವ ಗುರಿಯನ್ನು ಹೊಂದಿದೆ. ಭಾರತದ ಐಐ ಪಯಣವು ೧೯೬೦ರ ದಶಕದಲ್ಲಿ ಆರಂಭಿಕ ಕಂಪ್ಯೂಟರ್ ವಿಜ್ಞಾನ ಸಂಶೋಧನೆಯೊಂದಿಗೆ ಆರಂಭವಾಯಿತು. ೧೯೮೬ ರಲ್ಲಿ ಜ್ಞಾನ-ಆಧಾರಿತ ಕಂಪ್ಯೂಟರ್ ಸಿಸ್ಟಮ್ಸ್ ಯೋಜನೆಯೊಂದಿಗೆ ಒಂದು ಪ್ರಮುಖ ಹೆಜ್ಜೆ ಇಟ್ಟಿತು. ಇಂದು, ಭಾರತ ಜಾಗತಿಕ ಎಐ ನಾಯಕನಾಗುತ್ತಿದೆ. ಇದನ್ನು ಬೆಂಬಲಿಸಲು ಕೇಂದ್ರ ಸರ್ಕಾರವು ಸ್ಕಿಲ್ ಇಂಡಿಯಾ ಎಐ ಪೋರ್ಟಲ್, ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಕೌಶಲ್ಯ ಕಾರ್ಯಕ್ರಮ ಮತ್ತು ಎಐ ಯುವ ಬೂಟ್‌ಕ್ಯಾಂಪ್‌ನಂತಹ ಕಾರ್ಯಕ್ರಮಗಳನ್ನು ಆರಂಭಿಸಿದೆ.

<><*<><>*><>

ಸಮೋಸಾ, ಜಿಲೇಬಿ, ಲಡ್ಡು ಮುಂತಾದ ಆಹಾರ ಉತ್ಪನ್ನಗಳ ಕುರಿತಂತೆ ಎಚ್ಚರಿಕೆ ಮುನ್ಸೂಚನೆ ಹೊರಡಿಸಲು ಆರೋಗ್ಯ ಸಚಿವಾಲಯ ನಿರ್ದೇಶನ ನೀಡಿದೆಯೆಂಬ ಮಾಧ್ಯಮ ವರದಿಗಳನ್ನು ಆರೋಗ್ಯ ಸಚಿವಾಲಯ ತಳ್ಳಿ ಹಾಕಿದ್ದು, ಈ ವರದಿಗಳು ‘ದಾರಿ ತಪ್ಪಿಸುವ, ತಪ್ಪು ಮಾಹಿತಿ ಒಳಗೊಂಡಿದೆ ಹಾಗೂ ಅಧಾರರಹಿತವಾಗಿದೆ ಎಂದು ತಿಳಿಸಿದೆ.ಈ ಮಾಹಿತಿ, ಮಾಧ್ಯಮಗಳಲ್ಲಿ ಪ್ರಕಟಿಸಲಾಗುತ್ತಿರುವ ತಪ್ಪು ವಿವರಣೆಗಳಾಗಿದ್ದು, ಆರೋಗ್ಯ ಸಚಿವಾಲಯ ಕಾರ್ಪೊರೇಟ್ ಕಚೇರಿ, ಕ್ಯಾಂಟೀನ್, ಕೆಫೆಟೇರಿಯಾ, ಸಭಾಂಗಣ ಇತ್ಯಾದಿ ಸ್ಥಳಗಳಲ್ಲಿ ’ಅಡಗಿದ ಕೊಬ್ಬು’ ಹಾಗೂ ’ಅಧಿಕ ಸಕ್ಕರೆ ಇರುವ ಆಹಾರ ಸೇವನೆಯ ವಿರುದ್ಧ ಜಾಗೃತಿ ಮೂಡಿಸಲು ಸೂಚನಾ ಫಲಕಗಳನ್ನು ಇರಿಸುವ ಬಗ್ಗೆ ಸಲಹೆ ನೀಡಿದೆ. ಈ ಸಲಹೆ ಉದ್ಯೋಗಸ್ಥಳಗಳಲ್ಲಿ ಆರೋಗ್ಯಕ್ಕೆ ಒತ್ತು ನೀಡುವ ಉದ್ದೇಶದ ಭಾಗವಾಗಿದೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ. ಈ ಫಲಕಗಳು ದೇಶದಲ್ಲಿ ವೇಗವಾಗಿ ಹೆಚ್ಚುತ್ತಿರುವ ಸ್ಥೂಲಕಾಯ ಅಥವಾ ಬೊಜ್ಜು ಸಮಸ್ಯೆ ಎದುರಿಸಲು ಸಹಕಾರಿಯಾಗಲಿವೆ. ತನ್ನ ಸಲಹೆಯಲ್ಲಿ ಯಾವುದೇ ಆಹಾರಕ್ಕೆ ಎಚ್ಚರಿಕೆ ಮುನ್ಸೂಚನೆ ಹೊರಡಿಸಲು ಮಾರ್ಗಸೂಚಿ ನೀಡಿಲ್ಲ ಮತ್ತು ಭಾರತೀಯ ಕುರುಕಲು ತಿಂಡಿಗಳ ಕುರಿತು ಟೀಕಿಸುವ ಉದ್ದೇಶವೂ ಇಲ್ಲ ಎಂದು ಸಚಿವಾಲಯ ತಿಳಿಸಿದೆ.

<><*<><>*><>

ಏಳು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಬಯೋಮೆಟ್ರಿಕ್ ನವೀಕರಣವನ್ನು ಪೂರ್ಣಗೊಳಿಸುವಂತೆ ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ - ಯುಐಡಿಎಐ  ಪೋಷಕರು ಮತ್ತು ಪಾಲಕರಿಗೆ ಕರೆ ನೀಡಿದೆ. ಸದ್ಯ ಜಾರಿಯಲ್ಲಿರುವ ಮಾರ್ಗಸೂಚಿಗಳ ಪ್ರಕಾರ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು ಬೆಳವಣಿಗೆಯ ಕಾರಣಗಳಿಂದಾಗಿ ಬೆರಳಚ್ಚುಗಳು ಅಥವಾ ಐರಿಸ್ ಸ್ಕ್ಯಾನ್‌ಗಳನ್ನು ಒದಗಿಸಬೇಕಾಗಿಲ್ಲ ಎಂದು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.  ಮಗುವಿಗೆ ಐದು ವರ್ಷ ತುಂಬಿದ ನಂತರ, ಈ ಬಯೋಮೆಟ್ರಿಕ್‌ಗಳನ್ನು ನವೀಕರಿಸಬೇಕು ಮತ್ತು ೫ ರಿಂದ ೭ ವರ್ಷದೊಳಗಿನ ಪ್ರಕ್ರಿಯೆಯು ಪೂರ್ಣಗೊಂಡರೆ ಉಚಿತವಾಗಿರುತ್ತದೆ ಎಂದು ಅದು ಹೇಳಿದೆ. ಸದ್ಯದ ನಿಯಮಗಳಂತೆ ೭ ವರ್ಷದ ನಂತರವೂ ಕಡ್ಡಾಯ ಬಯೋಮೆಟ್ರಿಕ್ ನವೀಕರಣ ಪೂರ್ಣಗೊಳ್ಳದಿದ್ದರೆ, ಆಧಾರ್ ಸಂಖ್ಯೆಯನ್ನು ನಿಷ್ಕ್ರಿಯಗೊಳಿಸಬಹುದು. ಕಡ್ಡಾಯ ಬಯೋಮೆಟ್ರಿಕ್ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಲು ಯುಐಡಿಎಐ ಅಂತಹ ಮಕ್ಕಳ ಆಧಾರ್‌ನಲ್ಲಿ ನೋಂದಾಯಿಸಲಾದ ಮೊಬೈಲ್ ಸಂಖ್ಯೆಗಳಿಗೆ ಎಸ್‌ಎಂಎಸ್ ಸಂದೇಶಗಳನ್ನು ಕಳುಹಿಸಲು ಆರಂಭಿಸಿದೆ.

<><*<><>*><>

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಆಕ್ಸಿಯಮ್-೪ ಮಿಷನ್‌ನ ಇತರ ಮೂವರು ಸಿಬ್ಬಂದಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ತಮ್ಮ ೧೮ ದಿನಗಳ ಐತಿಹಾಸಿಕ ಕಾರ್ಯಾಚರಣೆಯ ನಂತರ ಸುರಕ್ಷಿತವಾಗಿ ಭೂಮಿಗೆ ವಾಪಸ್ಸಾಗಿದ್ದಾರೆ. ಸ್ಪೇಸ್‌ಎಕ್ಸ್ ಡ್ರ್ಯಾಗನ್ ಬಾಹ್ಯಾಕಾಶ ನೌಕೆ ನಿನ್ನೆ ಮಧ್ಯಾಹ್ನ ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೋ ಕರಾವಳಿಯ ಪೆಸಿಫಿಕ್ ಮಹಾಸಾಗರದಲ್ಲಿ ಬಂದಿಳಿಯಿತು. ಭೂಮಿಯ ಗುರುತ್ವಾಕರ್ಷಣೆಗೆ ಹೊಂದಿಕೊಳ್ಳಲು ಸಿಬ್ಬಂದಿ ಈಗ ಏಳು ದಿನಗಳ ಪುನರ್ವಸತಿ ಕಾರ್ಯಕ್ರಮಕ್ಕೆ ಒಳಗಾಗಲಿದ್ದಾರೆ. ಆಕ್ಸಿಯಮ್ -೪ ಮಿಷನ್‌ನ ಬಾಹ್ಯಾಕಾಶ ಯಾತ್ರೆ ಕಳೆದ ತಿಂಗಳು ೨೫ ರಂದು ಫ್ಲೋರಿಡಾದಿಂದ ಡ್ರ್ಯಾಗನ್ ಬಾಹ್ಯಾಕಾಶ ಕ್ಯಾಪ್ಸುಲ್ ಅನ್ನು ಹೊತ್ತ ಫಾಲ್ಕನ್ -೯ ರಾಕೆಟ್ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಕಡೆಗೆ ಪ್ರಯಾಣ ಬೆಳೆಸಿತ್ತು. ಗ್ರೂಪ್ ಕ್ಯಾಪ್ಟನ್ ಶುಕ್ಲಾ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಮತ್ತು ೧೯೮೦ರಲ್ಲಿ ಬಾಹ್ಯಾಕಾಶಕ್ಕೆ ಹೋದ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ನಂತರ ಎರಡನೇ ಭಾರತೀಯ ಗಗನಯಾತ್ರಿಯಾಗಿದ್ದಾರೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿದ್ದಾಗ ಶುಕ್ಲಾ ಏಳು ಭಾರತ ಕೇಂದ್ರಿತ ಮೈಕ್ರೋಗ್ರಾವಿಟಿ ಪ್ರಯೋಗಗಳನ್ನು ನಡೆಸಿದರು. ಈ ಪ್ರಯೋಗಗಳನ್ನು ಭವಿಷ್ಯದ ಉಪಗ್ರಹ ಕಾರ್ಯಾಚರಣೆಗಳು ಮತ್ತು ದೀರ್ಘಾವಧಿಯ ಬಾಹ್ಯಾಕಾಶ ವಾಸಕ್ಕಾಗಿ ನಿರ್ಣಾಯಕ ದತ್ತಾಂಶವನ್ನು ಸಂಗ್ರಹಿಸಲು ರೂಪಿಸಲಾಗಿದೆ. ಭಾನುವಾರ, ನಾಸಾದ ದಂಡಯಾತ್ರೆಯ ಸಿಬ್ಬಂದಿ ಆಕ್ಸಿಯಮ್ -೪ ಸಿಬ್ಬಂದಿಗೆ ಸಾಂಪ್ರದಾಯಿಕ ಸಮಾರಂಭವನ್ನು ಆಯೋಜಿಸಲಾಗಿತ್ತು, ವಿದಾಯ ಸಮಾರಂಭದಲ್ಲಿ ಮಾತನಾಡಿದ ಶುಕ್ಲಾ, ತಮ್ಮ ಬಾಹ್ಯಾಕಾಶ ಪಯಣ ನಿಜಕ್ಕೂ ಅದ್ಭುತವಾಗಿತ್ತು ಎಂದು ಬಣ್ಣಿಸಿದರು. ಆಕಾಶ ಗಂಗಾ ಎಂದು ಕರೆಯಲ್ಪಡುವ ಈ ಮಿಷನ್, ಆಕ್ಸಿಯಮ್ ಸ್ಪೇಸ್, ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ-ನಾಸಾ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಜಂಟಿ ಪ್ರಯತ್ನವಾಗಿದೆ. ಶುಭಾಂಶು ಶುಕ್ಲಾ ಸುರಕ್ಷಿತವಾಗಿ ಭೂಮಿಗೆ ಹಿಂತಿರುಗಿರುವ ಹಿನ್ನೆಲೆಯಲ್ಲಿ ಅವರ ಪೋಷಕರು ತಮ್ಮ ಸಂತಸವನ್ನು ಹಂಚಿಕೊಂಡಿದ್ದಾರೆ.

**ಧ್ವನಿ: ಶುಕ್ಲಾ ತಂದೆ- ತಾಯಿ**

**<><*<><>*><>**

ಭಾರತದ ಬ್ಯಾಡ್ಮಿಂಟನ್ ಆಟಗಾರರಾದ ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ಯುವ ಶಟ್ಲರ್ ಲಕ್ಷ್ಯ ಸೇನ್ ಹಾಗೂ ಪುರುಷರ ಡಬಲ್ಸ್ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಂದು ಟೋಕಿಯೋದಲ್ಲಿ ನಡೆಯಲಿರುವ ಜಪಾನ್ ಓಪನ್ ಸೂಪರ್ ೭೫೦ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ತಮ್ಮ ಅಭಿಯಾನ ಆರಂಭಿಸಲಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>